## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1691 (1895) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಸತಿ ಗೃಹಗಳನ್ನು ಹೋಂ ಸ್ಟೇ, ಪಿಜಿ, ಸರ್ವೀಸ್ ಅಪಾರ್ಟ್‌ಮೆಂಟ್. ರೆಸಾರ್ಟ್ ಹಾಗೂ ಇತರ ವಾಣಿಜ್ಯ/ಪ್ರವಾಸಿ ವಸತಿ ಉದ್ದೇಶಗಳಿಗೆ ಬಳಸಲು ಅನುಸರಿಸಲಾಗುತ್ತಿರುವ ಪ್ರಸ್ತುತ ನಿಯಮಗಳು ಮತ್ತು ಮಾರ್ಗಸೂಚಿಗಳು ಯಾವುವು; ವಸತಿ ಬಳಕೆಯನ್ನು ವಾಣಿಜ್ಯ ಬಳಕೆಗೆ ಪರಿವರ್ತಿಸಲು ಅಗತ್ಯವಿರುವ ಪರವಾನಗಿ ಮತ್ತು ಅನುಮತಿ ಪಡೆಯುವ ಪ್ರಮಾಣೀಕೃತ ಮಾರ್ಗಸೂಚಿಗಳೇನು; | ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೋಂ ಸ್ಟೇ ರೆಸಾರ್ಟ್ ಹಾಗೂ ವಾಣಿಜ್ಯ/ ಪ್ರವಾಸಿ ವಸತಿ ಉದ್ದೇಶಗಳಿಗೆ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಲಾಗುತ್ತಿದೆ.<br>ಸಂಬಂಧಪಟ್ಟ ಉದ್ದಿಮೆದಾರರು ಪ್ರವಾಸೋದ್ಯಮ ಇಲಾಖೆಯಿಂದ ನೋಂದಣಿ ಮಾಡಿಕೊಂಡು, ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದಾರೆ ಹಾಗೂ ಸರ್ವಿಸ್ ಅಪಾರ್ಟ್‌ಮೆಂಟ್ ಹಾಗೂ ಪಿಜಿಗಳಿಗೆ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ. 321291 DMA/DEV/82020 ದಿನಾಂಕ: 27-01-2021 ರ ಅನ್ವಯ ಪರವಾನಿಗೆ ನೀಡಲಾಗುತ್ತಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಪೇಯಿಂಗ್ ಗೆಸ್ಟ್ (PG) ವಸತಿ ಸೌಕರ್ಯಗಳಿಗೆ ವ್ಯಾಪಾರ ಪರವಾನಗಿ ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳ ಪ್ರತಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಆ) | ಮಂಗಳೂರು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನೋಂದಾಯಿಸಲಾದ ಹೋಂ ಸ್ಟೇ, ಪಿಜಿ, ಸರ್ವೀಸ್ ಅಪಾರ್ಟ್‌ಮೆಂಟ್, ರೆಸಾರ್ಟ್ ಸಂಸ್ಥೆಗಳ ಸಂಖ್ಯೆ ಅವುಗಳಿಂದ ಸಂಗ್ರಹಿಸಲಾದ ಪರವಾನಿಗೆ ಶುಲ್ಕ ಮತ್ತು ತೆರಿಗೆಗಳು ಮತ್ತು ಇತರ ವಿವರಗಳೇನು; | ಮಂಗಳೂರು ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ನೊಂದಾಯಿಸಲ್ಪಟ್ಟ ಪಿಜಿಗಳ ಸಂಖ್ಯೆ :- 153<br>ಸರ್ವೀಸ್ ಅಪಾರ್ಟ್‌ಮೆಂಟ್ ಸಂಖ್ಯೆ:-22<br>2025-2026ನೇ ಸಾಲಿನಲ್ಲಿ ವಿಧಿಸಲಾದ ಶುಲ್ಕ ವಿವರ<br>ಪರವಾನಿಗೆ ಶುಲ್ಕ: ರೂ. 7,10,004.00<br>ಇತರೆ ಶುಲ್ಕಗಳು: ರೂ. 23,64,716.00 |
| ಇ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಿಜಿ ವಸತಿಗಳಿಗೆ ಸಂಬಂಧಿಸಿದಂತೆ ಕಟ್ಟಡ ಸುರಕ್ಷತೆ, ಅಗ್ನಿಶಾಮಕ ಪ್ರಮಾಣಪತ್ರ. ಪಾರ್ಕಿಂಗ್ ವ್ಯವಸ್ಥೆ, ಕೊಠಡಿಗಳ ಗರಿಷ್ಠ ಸಾಮರ್ಥ್ಯ. ಆರೋಗ್ಯ ಮತ್ತು ಸ್ವಚ್ಛತಾ ಮಾನದಂಡಗಳು ಹಾಗೂ ಸ್ಥಳೀಯ ಪೊಲೀಸ್ ಪರಿಶೀಲನೆ ಸಂಬಂಧಿಸಿದ ನಿಯಮಗಳು ಯಾವುವು; | ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಪೇಯಿಂಗ್ ಗೆಸ್ಟ್ (PG) ವಸತಿ ಸೌಕರ್ಯಗಳಿಗೆ ವ್ಯಾಪಾರ ಪರವಾನಗಿ ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |

<table>
<tr>
<td>ಈ)</td>
<td>ಕಳೆದ ಮೂರು ವರ್ಷಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆವಾರು ಎಷ್ಟು ಹೋಂ ಸ್ಟೇ. ಪಿಜಿ. ಸರ್ವೀಸ್ ಅಪಾರ್ಟ್‌ಮೆಂಟ್ ಹಾಗೂ ರೆಸಾರ್ಟ್‌ಗಳು ನೋಂದಾಯಿಸಲ್ಪಟ್ಟಿವೆ; ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಪಿಜಿ/ಹೋಂ ಸ್ಟೇ/ವಸತಿ ವಾಣಿಜ್ಯ ಕಟ್ಟಡಗಳ ಸಂಖ್ಯೆ ಎಷ್ಟು; ಅವುಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ವಿವರವೇನು;</td>
<td>ಕಳೆದ ಮೂರು ವರ್ಷಗಳಲ್ಲಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನೋಂದಾಯಿಸ್ಪಲ್ಪಟ್ಟ ಹೋಂ ಸ್ಟೇ. ಪಿಜಿ. ಸರ್ವೀಸ್ ಅಪಾರ್ಟ್‌ಮೆಂಟ್ ಹಾಗೂ ರೆಸಾರ್ಟ್‌ಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಪಿಜಿಗಳ ಸಂಖ್ಯೆ</th><th>ಸರ್ವೀಸ್ ಅಪಾರ್ಟ್‌ಮೆಂಟ್</th><th>ಒಟ್ಟು</th></tr>
<tr><td>2023-24</td><td>111</td><td>14</td><td>125</td></tr>
<tr><td>2024-25</td><td>128</td><td>11</td><td>139</td></tr>
<tr><td>2025-26</td><td>153</td><td>22</td><td>175</td></tr>
</table>
ಈವರೆಗೆ ಅನಧಿಕೃತವಾಗಿ ನಡೆಸಿಕೊಂಡು ಬಂದಂತಹ ಒಟ್ಟು 7 ಪಿಜಿ ಗಳನ್ನು ಮುಚ್ಚಲಾಗಿರುತ್ತದೆ.</td>
</tr>
<tr>
<td>ಉ)</td>
<td>ವಸತಿ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಪಿಜಿ ಮತ್ತು ಹೋಂ ಸ್ಟೇಗಳಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ತೊಂದರೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅವುಗಳ ನಿಯಂತ್ರಣಕ್ಕೆ ರಾಜ್ಯವ್ಯಾಪಿ ಏಕೀಕೃತ ಮಾರ್ಗಸೂಚಿ ರೂಪಿಸುವ ಬಗ್ಗೆ ಸರ್ಕಾರದ ನಿಲುವೇನು; ಈ ಕುರಿತು ಯಾವ ಕಾಲಮಿತಿಯೊಳಗೆ ಕ್ರಮವಹಿಸಲಾಗುವುದು?</td>
<td>ವಸತಿ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಪಿಜಿ ಮತ್ತು ಹೋಂ ಸ್ಟೇಗಳ ನಿಯಂತ್ರಣಕ್ಕೆ ರಾಜ್ಯವ್ಯಾಪಿ ಏಕೀಕೃತ ಮಾರ್ಗಸೂಚಿಗಳನ್ನು ಪೌರಾಡಳಿತ ನಿರ್ದೇಶನಾಲಯದಿಂದ ದಿನಾಂಕ: 23.04.2025 ರಂದು ಹೊರಡಿಸಲಾಗಿದೆ. ಅನುಬಂಧ-2 ರಲ್ಲಿ ನೀಡಲಾಗಿದೆ.</td>
</tr>
</table>

**ಸಂಖ್ಯೆ: ನಅಇ 112 ಎಂಎನ್‌ಇ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

ಅನುಬಂಧ-01

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: 321291 DMA/DEV/OTH/8/2020 ದಿನಾಂಕ:28-01-2021

## ತಿದ್ದುಪಡಿ

ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 321291 DMA/DEV/OTH/8/2020, ದಿನಾಂಕ: 27-01-2021 ರ ವಿಷಯದಲ್ಲಿ " **ಕಟ್ಟಡ ಪರವಾನಿಗೆ** " ಎಂಬುದರ ಬದಲಾಗಿ " **ಉದ್ದಿಮೆ ಪರವಾನಿಗೆ** " ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು:

1) ಜಂಟಿ ನಿರ್ದೇಶಕರು, ಕೆ.ಎಂ.ಡಿ.ಎಸ್, ಬೆಂಗಳೂರು.
2) ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು / ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
4) ಕಛೇರಿ ಪ್ರತಿ.

Scanned by CamScanner

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: 321291 DMA/DEV/OTH/8/2020 ದಿನಾಂಕ:27-01-2021

## ಸುತ್ತೋಲೆ

ವಿಷಯ: ಕಟ್ಟಡ ಪರವಾನಿಗೆ ನೀಡಲು ಎರಡು ದಾಖಲೆಗಳನ್ನು ಪಡೆಯುವ ಬಗ್ಗೆ.

ಉಲ್ಲೇಖ:
1) ಕೇಂದ್ರ ಸರ್ಕಾರದ Ease of Doing Business ಶಿಫಾರಸ್ಸುಗಳು.
2) ಸರ್ಕಾರದ ಆದೇಶ ಸಂಖ್ಯೆ: ನಅಇ 88 ಜಿಇಎಲ್ 2020, ಬೆಂಗಳೂರು, ದಿನಾಂಕ:23-09-2020.
3) ಸರ್ಕಾರದ ಆದೇಶ ಸಂಖ್ಯೆ: ನಅಇ 87 ಜಿಇಎಲ್ 2020, ಬೆಂಗಳೂರು, ದಿನಾಂಕ:22-09-2020.
4) ಸರ್ಕಾರದ ಆದೇಶ ಸಂಖ್ಯೆ: ನಅಇ 87 ಜಿಇಎಲ್ 2020(1), ಬೆಂಗಳೂರು, ದಿನಾಂಕ:22-09-2020.
5) ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: DMA/DEV/OTH/8/2020, ದಿನಾಂಕ:16-10-2020.
6) ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: DMA/BDL/2015-16/14401, ದಿನಾಂಕ:05-02-2016.

******

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ (2) ರ ಸರ್ಕಾರದ ಆದೇಶದಲ್ಲಿ ಉದ್ದಿಮೆ ಪರವಾನಿಗೆ ಮತ್ತು ಉದ್ದಿಮೆ ಪರವಾನಿಗೆ ನವೀಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಆನ್‌ಲೈನ್ ತಂತ್ರಾಂಶವನ್ನು ಕಡ್ಡಾಯಗೊಳಿಸಿರುತ್ತದೆ. ಅದೇ ರೀತಿ ಸರ್ಕಾರವು ಉಲ್ಲೇಖಿತ(3)ರ ಆದೇಶದಲ್ಲಿ ಸ್ವಯಂ ಚಾಲಿತವಾಗಿ ನವೀಕರಣ ಮಾಡುವ ಬಗ್ಗೆ ಸರ್ಕಾರವು ನಿರ್ದೇಶಿಸಿದ್ದು, ಇದರ ಬಗ್ಗೆ ಪೌರಾಡಳಿತ ನಿರ್ದೇಶನಾಲಯದಿಂದ ಉಲ್ಲೇಖಿತ(5) ರ ಸುತ್ತೋಲೆಯಲ್ಲಿ ಸೂಕ್ತ ಕ್ರಮವಹಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿರುತ್ತದೆ.

ಉದ್ದಿಮೆ ಪರವಾನಿಗೆ ನಿರ್ವಹಣೆಗೆ ಪೌರಾಳಿತ ನಿರ್ದೇಶನಾಲಯದಿಂದ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿಯಿಂದ ಅಭಿವೃದ್ಧಿಪಡಿಸಿದ ವ್ಯಾಪಾರ್ ತಂತ್ರಾಂಶವನ್ನು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಿ ಉಲ್ಲೇಖಿತ(6) ಸುತ್ತೋಲೆಯಲ್ಲಿ ಕಡ್ಡಾಯಗೊಳಿಸಿದೆ. ವ್ಯಾಪಾರ್ ತಂತ್ರಾಂಶದಲ್ಲಿ ನಾಗರೀಕರು ಯಾವುದೇ ವ್ಯಕ್ತಿಗತ ಸಂಪರ್ಕವಿಲ್ಲದೆ ಸ್ವಯಂಚಾಲಿತವಾಗಿ ಉದ್ದಿಮೆ ಪರವಾನಿಗೆ ನವೀಕರಣ ಮಾಡಿಕೊಳ್ಳಲು ಅವಕಾಶಕಲ್ಪಸಿದೆ.

ಕೇಂದ್ರ ಸರ್ಕಾರದ Department for Promotion of Industry and Internal Trade ಇಲಾಖೆಯ State Business Reform Action Plan ನ Ease of Doing Business ನ ಶಿಫಾರಸ್ಸುಗಳನ್ವಯ ಉದ್ದಿಮೆ ಪರವಾನಿಗೆ ಅರ್ಜಿಯೊಂದಿಗೆ ಈ ಕೆಳಗೆ ಕಾಣಿಸಿದ ಎರಡು ದಾಖಲೆಗಳನ್ನು ಪಡೆಯಬೇಕಿರುತ್ತದೆ.

1) ಉದ್ದಿಮೆಯ ಮಾಲೀಕರ ಗುರುತಿನ ದಾಖಲೆ (ID Proof) ಮತ್ತು

2) ಉದ್ದಿಮೆ ಸ್ಥಳದ ಗುತ್ತಿಗೆ ಕರಾರು ಪತ್ರ / ಕಾನೂನುಬದ್ಧ ಸ್ವಾಧೀನತೆಯ ದಾಖಲೆ.

ವ್ಯಾಪಾರ್ ಆನ್‌ಲೈನ್ ತಂತ್ರಾಂಶದಲ್ಲಿ ಉದ್ದಿಮೆ ಪರವಾನಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ಮೇಲಿನ ಎರಡು ದಾಖಲೆಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡಿ ಸಲ್ಲಿಸಲು ಅವಕಾಶಕಲ್ಪಿಸಲಾಗಿರುತ್ತದೆ. ಅದರಂತೆ ನಗರ ಸ್ಥಳೀಯ ಸಂಸ್ಥೆಗಳು ಉದ್ದಿಮೆ ಪರವಾನಿಗೆಯನ್ನು ನೀಡಲು ಮೇಲಿನ ಎರಡು ದಾಖಲೆಗಳನ್ನು ಹೊರತುಪಡಿಸಿ ಯಾವುದೇ ದಾಖಲೆಗಳನ್ನು ಪಡೆಯಬಾರದು ಎಂದು ಸೂಚಿಸಿದೆ.

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

<u>ಪ್ರತಿಯನ್ನು:</u>

1) ಜಂಟಿ ನಿರ್ದೇಶಕರು, ಕೆ.ಎಂ.ಡಿ.ಎಸ್, ಬೆಂಗಳೂರು.
2) ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು / ಪೌರಾಯುಕ್ತರು/ ಮುಖ್ಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಜಿಲ್ಲಾ ನಗರಾಭಿವೃದ್ಧಿ ಕೋಶಗಳ ಯೋಜನಾ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
4) ಕಛೇರಿ ಪ್ರತಿ.

ಅನುಬಂಧ - 02

ನಿರ್ದೇಶಕರ ಕಚೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ: 080-22866302/7172
ಇ-ಮೇಲ್: dmablr@gmail.com
ವೆಬ್ಸೈಟ್: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ. ಅಂಬೇಡ್ಕರ ವೀಧಿ, ಬೆಂಗಳೂರು - 560001.

ಸಂ:1650968/DMA/DEV/OTH/9/2025 ದಿನಾಂಕ:23-04-2025

**ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಪೇಯಿಂಗ್ ಗೆಸ್ಟ್ ವಸತಿ ಸೌಕರ್ಯಗಳಿಗೆ ವ್ಯಾಪಾರ ಪರವಾನಗಿ ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳು.**

ಇತ್ತೀಚಿನ ವರ್ಷಗಳಲ್ಲಿ ನಗರೀಕರಣದ ವೇಗ ಹೆಚ್ಚಾಗಿರುವ ಹಿನ್ನಲೆಯಲ್ಲಿ ನೌಕರರು ವಿದ್ಯಾರ್ಥಿಗಳು ಮತ್ತು ಕಾರ್ಮಿಕ ವರ್ಗದ ಜನರು ನಗರಗಳಿಗೆ ಬಹುಮುಖವಾಗಿ ಸಾಗುತ್ತಿದ್ದಾರೆ. ಇದರಿಂದ ವಸತಿಯ ಅವಶ್ಯಕತೆ ಹೆಚ್ಚಾಗಿದ್ದು, Paying Guest(PG) ಸೌಲಭ್ಯಗಳ ಸಂಖ್ಯೆಯು ಸಾಕಷ್ಟು ಹೆಚ್ಚಾಗಿದೆ. ಆದರೆ ಈ ಬೆಳವಣಿಗೆಯು ನಿಯಮ ಬದ್ಧವಾಗಿಲ್ಲದೆ ಅನಧಿಕೃತ ರೀತಿಯಲ್ಲಿ ನಡೆಯುತ್ತಿರುವುದು ದೊಡ್ಡ ಸಮಸ್ಯೆಯಾಗಿದೆ.

Karnataka Municipal Act 1964 Sec 256& Karnataka Municipal Corporation Act 1976 Sec 343 ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪೇಯಿಂಗ್ ಗೆಸ್ಟ್ ವಸತಿಗಳಿಗೆ ಹೊಸ ವ್ಯಾಪಾರ ಪರವಾನಗಿ ನೀಡಲು ಮತ್ತು ಅಸ್ತಿತ್ವದಲ್ಲಿರುವ ವ್ಯಾಪಾರ ಪರವಾನಗಿಗಳನ್ನು ನವೀಕರಿಸಲು ಕೆಳಗೆ ತಿಳಿಸಲಾದ ನಿಯಮಗಳು ಮತ್ತು ಷರತ್ತುಗಳನ್ನು ಪಾಲಿಸುವುದು ಅವಶ್ಯಕ.

1. ಎಲ್ಲಾ ಪ್ರವೇಶ ದ್ವಾರಗಳು, ನಿರ್ಗಮನಗಳು ಮತ್ತು ಕಾರಿಡಾರ್‌ಗಳನ್ನು ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ನೊಂದಿಗೆ ಸಿಸಿಟಿವಿ ಕಣ್ಗಾವಲಿನಲ್ಲಿ ಹೊಂದಿರಬೇಕು, ಇದರಿಂದಾಗಿ ಪ್ರತಿ ಕ್ಯಾಮೆರಾದ 90 ದಿನಗಳ ದೃಶ್ಯಾವಳಿಗಳ ಸಂಗ್ರಹಣೆಯನು ಖಚಿತಪಡಿಸಿಕೊಳ್ಳಬೇಕು.
2. ಆಕ್ಯುಪೆನ್ಸಿ ಸಂಬಂಧಿತ ಕಟ್ಟಡ ಮಾನದಂಡಗಳ ಪ್ರಕಾರ, ಪ್ರತಿಯೊಬ್ಬ ನಿವಾಸಿಯು ತಲಾ 70 ಚದರ ಅಡಿಗಿಂತ ಕಡಿಮೆಯಿಲ್ಲದ ಜಾಗವನು ಹೊಂದಿರಬೇಕು ಎಂದು ಖಚಿತಪಡಿಸಿಕೊಳ್ಳಬೇಕು. ಪರವಾನಗಿ ನೀಡಲು ಪರಿಗಣಿಸಲಾಗಿರುವ ಸೌಲಭ್ಯಕ್ಕಾಗಿ ನಿರ್ದಿಷ್ಟ ಸಂಖ್ಯೆಯ ನಿವಾಸಿಗಳಿಗೆ ಪರವಾನಗಿ ನೀಡಬೇಕು.
3. ನಿವಾಸಿಗಳಿಗೆ ಸ್ವಚ್ಛ ಮತ್ತು ಆರೋಗ್ಯಕರ ವಾಶ್ ರೂಮ್ ಸೌಲಭ್ಯಗಳನ್ನು ಹೊಂದಿರಬೇಕು.
4. ಮಾಲೀಕರು/ಅರ್ಜಿದಾರರು ಕುಡಿಯುವ ನೀರಿನ ಮೂಲವನ್ನು ಹೊಂದಿರಬೇಕು ಮತ್ತು 135 LPCD (ಪ್ರತಿ ವ್ಯಕ್ತಿಗೆ ದಿನಕ್ಕೆ ಲೀಟರ್) ನೀರಿನ ಲಭ್ಯತೆಯನು ಖಚಿತಪಡಿಸಿಕೊಳ್ಳಬೇಕು
5. ವಸತಿ ಗೃಹವನ್ನು ನಡೆಸುವವರು ತನ್ನದೇ ಆದ ಸಾಮೂಹಿಕ ಅಡುಗೆಮನೆಯನ್ನು ಹೊಂದಿದ್ದರೆ, ಅದು ನಗರ ಸ್ಥಳೀಯ ಸಂಸ್ಥೆಯಿಂದ ವ್ಯಾಪಾರ ಪರವಾನಗಿಯನ್ನು ಪಡೆದ 3 ತಿಂಗಳೊಳಗೆ FSSAI(Food Safety and Standards Authority of India)ಪರವಾನಗಿಯನ್ನು ಪಡೆಯಬೇಕು.
6. ಪೇಯಿಂಗ್ ಗೆಸ್ಟ್ ವಸತಿ ಸೌಕರ್ಯಗಳಿಗೆ ವ್ಯಾಪಾರ ಪರವಾನಗಿ ನೀಡಲು 2 4 / 7 ಸಾಬೀತ ರುಜುವಾತುಗಳನ್ನು ಹೊಂದಿರುವ ಕನಿಷ್ಠ ಒಬ್ಬ ಭದ್ರತಾ ಸಿಬ್ಬಂದಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು.
7. ವ್ಯಾಪಾರ ಪರವಾನಗಿ ನೀಡುವ ಮೊದಲು ಕಟ್ಟಡವು ಪ್ರಾಧಿಕೃತ ಅಧಿಕಾರಿಯಿಂದ ಅಗ್ನಿ ಸುರಕ್ಷತಾ ಅನುಮತಿಯನು ಹೊಂದಿದೆಯೇ? ಎಂದು ಖಚಿತಪಡಿಸಿಕೊಳ್ಳಬೇಕು.
8. ಯಾವುದೇ ತುರ್ತು ಪರಿಸ್ಥಿತಿಗಾಗಿ ನಗರ ಸ್ಥಳೀಯ ಸಂಸ್ಥೆ ವತಿಯಿಂದ ನಿಯೋಜಿಸಿರುವ ಅಧಿಕಾರಿ ಮತ್ತು ಪೊಲೀಸರ ಸಹಾಯವಾಣಿ ಸಂಖ್ಯೆಗಳನ್ನು ಪ್ರದರ್ಶಿಸಬೇಕು.
9. ಪೇಯಿಂಗ್ ಗೆಸ್ಟ್ ವಸತಿ ಗೃಹದಲ್ಲಿ ಪ್ರಥಮ ಚಿಕಿತ್ಸಾ ಕಿಟ್‌ನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು.
10. ತಮ್ಮ ವಸತಿ ಗೃಹಕ್ಕೆ ಸಂಬಂಧಿಸಿದ ತ್ಯಾಜ್ಯ ವಿಲೇವಾರಿಗಾಗಿ ಘನತ್ಯಾಜ್ಯ ವಿಂಗಡಣೆಯನ್ನು ಅನುಸರಿಸಬೇಕು.
11. ಸಂಬಂಧಿತ ಇನ್ನಿತರೆ ಪ್ರಾಧಿಕಾರಗಳಿಂದ ಅಗತ್ಯ ನಿರಾಕ್ಷೇಪಣಾ ಪತ್ರ/ಅನುಮತಿ ಪಡೆದಿರುವ ಕುರಿತು ಖಚಿತಪಡಿಸಿಕೊಳ್ಳುವುದು.

ಇಲ್ಲಿ ಎಲ್ಲಾ ಮಹಾನಗರಪಾಲಿಕೆಗಳ ಆಯುಕ್ತರುಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಪೌರಾಯುಕ್ತರು/ಮುಖ್ಯಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲಾ ಸೌಲಭಗಳಿಗೆ 6 ತಿಂಗಳಿಗೊಮ್ಮೆ ಮೇಲೆ ತಿಳಿಸಲಾದ ಮಾರ್ಗಸೂಚಿಗಳ ಅನುಸರಣೆಯನ್ನು ಮೇಲ್ವಿಚಾರಣೆ ಮಾಡಲು ಸೂಚಿಸಲಾಗಿದೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮೇಲೆ ತಿಳಿಸಲಾದ ಮಾರ್ಗಸೂಚಿಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಯಾವುದೇ ಉಲ್ಲಂಘನೆಗಳು ಕಂಡುಬಂದರೆ ಅಂತಹ ಸೌಲಭ್ಯದ ವಿರುದ್ಧ Karnataka Municipal Act 1964 & Kamataka Municipal Corporation Act 1976 ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸೂಚಿಸಿದೆ.

Digitally signed by
PRABHULING KAVALIKATTI
Date: 23-04-2025
17:45:20

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.